Sri D. M. SIDDIAH.—Is it not a fact that two lakhs of rupees has been promised to be given from Nanjangud temple ?

ಶ್ರೀ ಎಸ್. ಆರ್. ಕಂಠಿ.—ಎರಡು ಲಕ್ಷ ರೂಪಾಯಿ ಕೊಡುತ್ತೇವೆಂದು ಯಾರೂ ಮುಂದೆ ಬಂದಿಲ್ಲ. ಜಾಗ ಕೊಡುತ್ತೇವೆಂದು ಯಾರೂ ಹೇಳಿಲ್ಲ. ಒಂದು ವೇಳೆ ಕೊಟ್ಟೂರು ಸರಕಾರ ಮಾಡುವುದು ಸಾಧ್ಯವಿಲ್ಲ. ತಾವೇ ಮಾಡುತ್ತೇವೆ, ದುಡ್ಡು ಇದೆ ಎಂದು ಮುಂದೆ ಬಂದರೆ, ಅದನ್ನು ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡುತ್ತೇವೆ.

———

Construction of a High Level Bridge across the River North Pennar, instead of a Low Level Causeway.

*Q.—407. Sri R. KENCHAPPA (Pavagada).—

Will the Government be pleased to state :—

(*a*) whether it is a fact that a Low Level Causeway across the river North Pennar near Nagalamadike, Pavagada Taluk, is being constructed ;

(*b*) whether they are aware of the inconveniences caused to transport and communications since the two buses plying in this route had been stopped for 3 to 4 months during the rainy season due to heavy floods of the river ;

(*c*) whether they have received any representations requesting to convert the Low Level Causeway which is being constructed at present into a High Level Bridge in order to prevent such inconveniences ;

(*d*) whether the concerned Department would take steps to convert this Low Level Causeway into a High Level Bridge and take up the work as early as possible ?

A.—Sri KONDAJJI BASAPPA (Deputy Minister for Co-operation,) [on behalf of SRI VEERENDRA PATIL Minister for Public Works)].—

(*a*) Yes.
(*b*) Yes.
(*c*) Yes.
(*d*) No.

ಶ್ರೀ ಆರ್. ಕೆಂಚಪ್ಪ.—ಈ ನದಿಯು ಆಳವಾಗಿದ್ದು ಪ್ರವಾಹ ಹಾವಳಿಯಿಂದ ಆಗುವ ತೊಂದರೆ ನಿವಾರಣೆ ಮಾಡಲು ಹೈ ಲೆವೆಲ್ ಕಾಜ್‌ವೇ ಮಾಡುವುದು ಒಳ್ಳೆಯದಲ್ಲವೆ ?

†Sri KONDAJJI BASAPPA.—It is a matter of opinion. Government have examined this in detail and they have found that the low-level cause-way will suffice as there is a very low percentage of rainfall and also the duration of the floods is only for a short time. It was also found that no inconvenience will be caused immediately the floods recede

ಶ್ರೀ ಆರ್. ಕೆಂಚಪ್ಪ.—ಮಳೆಗಾಲದಲ್ಲಿ 3-4 ತಿಂಗಳು ಪ್ರವಾಹದಿಂದ ಸಂಚಾರ ನಿಂತು ಹೋಗುವುದರಿಂದ, ಈ ಪ್ರದೇಶದಲ್ಲಿಯ ಜನರಿಗೆ ಕೋರ್ಟು ಕಚೇರಿ ವ್ಯವಹಾರಕ್ಕೆ ಹೋಗಲು ಅನನು ಕೂಲವಾಗುತ್ತದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಅನನುಕೂಲವಾಗಿಲ್ಲ ಎಂದು ಹೇಳುವದಿಲ್ಲ. ಆಲ್ಲ ಮಳೆ ಕಡಿಮೆ ಯಾಗುತ್ತದೆ. ಮಳೆಗಾಲದಲ್ಲಿ ಪ್ರವಾಹ ಬಂದಾಗ್ಗೆ ಒಂದು ದಿವಸದ ಮಟ್ಟಿಗೆ ಸಂಚಾರ ತಡೆಯಾಗ ಬಹುದು. ನಮ್ಮ ಎಂಜಿನಿಯರ್ ಅವರ ಅಭಿಪ್ರಾಯದಲ್ಲಿ ಲೋ ಲೆವೆಲ್ ಕಾಜ್‌ವೇ ಸಾಕು ಎಂದು

(ಶ್ರೀ ಕೊಂಡಜ್ಜಿ ಬಸಪ್ಪ)

ಇದೆ. ಈಗಾಗಲೇ ಅರ್ಧದಷ್ಟು ಕೆಲಸ ನಡೆದು ಹೋಗಿದೆ. ಆದುದರಿಂದ ಈಗ ಇದನ್ನು ಪುನರ್ವಿಮರ್ಶೆ ಮಾಡುವುದು ಸಾಧ್ಯವಿಲ್ಲ.

ಶ್ರೀ ಆರ್. ಕೆಂಚಪ್ಪ.—ಈ ಪ್ರದೇಶದಲ್ಲಿ ಜಾಸ್ತಿ ಮಳೆಯಾಗದಿದ್ದರೂಕೂಡ ನಂದೀ ಬೆಟ್ಟದಲ್ಲಿ ಮಳೆ ಜಾಸ್ತಿಯಾಗಿ ನದಿಗೆ ಪ್ರವಾಹ ಬರುತ್ತದೆ ಮತ್ತು ಅದರಿಂದ ತೊಂದರೆಯಾಗುವದಿಲ್ಲವೆ ?

ಶ್ರೀ ಕೊಂಡಜ್ಜಿ ಬಸಪ್ಪ.—ಈಗಾಗಲೇ 1,16,000 ರೂ. ಎಸ್ಟಿಮೇಟು ತಯಾರಾಗಿ 58,000 ರೂಪಾಯಿ ಖರ್ಚು ಸಹ ಮಾಡಿದ್ದೇವೆ. ಆದ್ದರಿಂದ ಈಗ ಅದನ್ನು ಬದಲಾವಣೆ ಮಾಡುವುದು ಸಾಧುವಲ್ಲ ಮತ್ತು ಅವಶ್ಯಕತೆಯೇ ಕಂಡು ಬರುವುದಿಲ್ಲ.

ಶ್ರೀ ಆರ್. ಕೆಂಚಪ್ಪ.—ಮಳೆಗಾಲದಲ್ಲಿ 3-4 ತಿಂಗಳು ಸಂಚಾರಕ್ಕೆ ತೊಂದರೆಯಾಗುವುದಿಲ್ಲವೆ ?

ಶ್ರೀ ಕೊಂಡಜ್ಜಿ ಬಸಪ್ಪ.—ರೋ ಲೆವೆಲ್ ಕಾಜ್‌ವೇ ಇಲ್ಲವೆಂದು ತೊಂದರೆಯಾಗುತ್ತಾ ಇದೆ. ಒಬ್ಬ ಮಾನ್ಯ ಸದಸ್ಯರು. ಈ ನದಿಯಲ್ಲಿ ಎಷ್ಟು ಅಡಿ ಆಳ ನೀರು ಹರಿಯುತ್ತದೆ. ಮತ್ತು ಪ್ರವಾಹ ಬಂದಾಗ್ಗೆ ಎಷ್ಟು ದಿವಸ ಇರುತ್ತದೆ ಎನ್ನುವುದು ತನಿಖೆಯಿಂದ ಗೊತ್ತಾಗಿದೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಆ ವಿವರ ಈಗ ನನ್ನ ಹತ್ತಿರವಿಲ್ಲ. ಆದರೆ ನಮ್ಮ ಎಂಜಿನಿಯರಿಂಗ ಇಲಾಖೆಯವರು ಇದನ್ನೆಲ್ಲಾ ಪರಿಶೀಲನೆಮಾಡಿ ರೋ ಲೆವೆಲ್ ಕಾಜ್‌ವೇ ಸಾಕಾಗುತ್ತದೆಂದು ಒಂದು ನಿರ್ದಿಷ್ಟ ಅಭಿಪ್ರಾಯಕ್ಕೆ ಬಂದ ನಂತರವೇ ಎಸ್ಟಿಮೇಟು ಮಾಡಲಾಗುತ್ತದೆ.

Steps taken for the Advancement of socially and educationally Backward Classes of Citizens of the State.

*Q.—416. **Sri G. V. GOWDA** (Palya).—

Will the Government be pleased to state :—

whether they have taken steps to fix the criteria for the determination of socially and educationally backward classes of citizens in the State of Mysore for making special provisions for their advancement ?

A.—**Sri S. NIJALINGAPPA** (Chief Minister).—

The matter is under the consideration of Government.

1-30 P.M.

Sri G. V. GOWDA.—May I take it for granted that this matter is under consideration ever since the Supreme Court delivered judgment in last August or September ?

†**Sri S. NIJALINGAPPA.**—Even before it was under consideration and further it is under consideration and it continues to be under consideration.

Sri G. V. GOWDA.—What more time do Government require to come to adecision in this behalf ?

Sri S. NIJALINGAPPA.—We have to decide it before the Colleges re-open.

ಶ್ರೀ ಕೆ. ಲಕ್ಷ್ಮಪ್ಪ.—ಈ ವಿಷಯದಲ್ಲಿ ಸರ್ಕಾರದವರು ಕಮಿಟಿ ಫಾರಂ ಮಾಡಬೇಕೆಂದು ಪರಿಶೀಲನೆ ಮಾಡುತ್ತಿದ್ದಾರೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಇಲ್ಲ.

Sri S. SIVAPPA.—The Chief Minister has said that the matter is under consideration and that it will be under consideration. In view of